		84	4.04
		85	7.24
		92	2.26
		95/1	3.24
		98	2.34
27	ಸೋಮಿನಕೊಪ್ಪ	37/1	2.04
		57/1	10.30
28	ದೇವಕಾತಿಕೊಪ್ಪ	1	11.00
		2	0.29
		44	0.25
		51	8.21
		52	9.00
		56	8.00
		62	1.39
		69	3.33
		71	9.16
29	ಸಿದ್ದಲೀಪುರ	51/2	3.18
		193	4.05
		ಒಟ್ಟು	**567.30**

49 (27) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ವಿಶೇಷ ಆರ್ಥಿಕ ವಲಯ ಉದ್ದಿಮೆಗಳ ಪ್ರಸ್ತಾವ ಯಾವ ಹಂತದಲ್ಲಿದೆ ಮತ್ತು ನಿರ್ವಹಣಾ ಕಾರ್ಯವನ್ನು ಯಾರಿಗೆ ವಹಿಸಲಾಗಿದೆ?

ಆ) ಈ ವಿಶೇಷ ಆರ್ಥಿಕ ವಲಯ ಸ್ಥಾಪನೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಪ್ರಸ್ತುತ ಯೋಜನಾ ಪ್ರಗತಿ ಯಾವ ಹಂತದಲ್ಲಿದೆ. (ವಿವರ ನೀಡುವುದು);

ಇ) ಈ ವಿಶೇಷ ಆರ್ಥಿಕ ವಲಯದಲ್ಲಿ 30.11.2009ರವರೆಗೆ ಯಾವ ಉದ್ದಿಮೆದಾರರಿಗೆ ನಿವೇಶನ ಹಂಚಿಕೆ ಮಾಡಲಾಗಿದೆ ಹಾಗೂ ನಿವೇಶನ ಪಡೆಯಲು ಯಾವ ಮಾನದಂಡ ವಿಧಿಸಲಾಗಿದೆ. (ವಿವರ ನೀಡುವುದು);

ಈ) ಶಾಹಿ ಎಕ್ಸ್‌ಪೋರ್ಟ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಶಿವಮೊಗ್ಗದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಸಿದ್ಧ ಉಡುಪು ತಯಾರಿಕಾ ಘಟಕಕ್ಕೆ 250 ಎಕರೆ ಭೂ ಮಂಜೂರಾತಿ ನೀಡಲಾಗಿದೆ. 250 ಎಕರೆಯಲ್ಲಿ ಯಾವ ಯಾವ ಘಟಕಕ್ಕೆ ಎಷ್ಟು ಎಕರೆ ಪ್ರದೇಶವನ್ನು ಬಳಸಿ ಕೊಳ್ಳಲಾಗುತ್ತಿದೆ. (ಘಟಕವಾರು ಸಂಪೂರ್ಣ ವಿವರ ನೀಡುವುದು);

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಶಿವಮೊಗ್ಗದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ಇಂಜಿನಿಯರಿಂಗ್ ಸೆಕ್ಟರ್‌ನ ವಿಶೇಷ ಆರ್ಥಿಕ ವಲಯದಲ್ಲಿ ಯಾವುದೇ ಎಸ್.ಇ.ಜೆಡ್ ಘಟಕಗಳು ಸ್ಥಾಪನೆಗೆ ಮುಂದೆ ಬಾರದೇ ಇರುವುದರಿಂದ, ಸದರಿ ಎಸ್.ಇ.ಜೆಡ್ ಸ್ಥಾಪಿಸುವ ವಿಷಯವನ್ನು ಸರ್ಕಾರವು ಕೈಬಿಟ್ಟಿದೆ ಮತ್ತು ಕೇಂದ್ರ ಸರ್ಕಾರವು ಕೆ.ಐ.ಎ.ಡಿ.ಬಿ.ಗೆ ನೀಡಿದ ಅನುಮೋದನೆಯನ್ನು ರಾಜ್ಯ ಸರ್ಕಾರದ ಮನವಿಯಂತೆ ಹಿಂದಕ್ಕೆ ಪಡೆದಿದೆ.

ಆ) ಶಿವಮೊಗ್ಗದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ಇಂಜಿನಿಯರಿಂಗ್ ಸೆಕ್ಟರ್‌ನ ವಿಶೇಷ ಆರ್ಥಿಕ ವಲಯದಲ್ಲಿ ಯಾವುದೇ ಎಸ್.ಇ.ಜೆಡ್ ಘಟಕಗಳು ಸ್ಥಾಪನೆಗೆ ಮುಂದೆ ಬಾರದೇ ಇರುವುದರಿಂದ, ಸದರಿ ಎಸ್.ಇ.ಜೆಡ್ ಸ್ಥಾಪಿಸುವ ವಿಷಯವನ್ನು ಸರ್ಕಾರವು ಕೈಬಿಟ್ಟಿದೆ ಮತ್ತು ಕೇಂದ್ರ ಸರ್ಕಾರವು ಕೆ.ಐ.ಎ.ಡಿ.ಬಿ.ಗೆ ನೀಡಿದ ಅನುಮೋದನೆಯನ್ನು ರಾಜ್ಯ ಸರ್ಕಾರದ ಮನವಿಯಂತೆ ಹಿಂದಕ್ಕೆ ಪಡೆದಿದೆ.

ಇ) ಶಿವಮೊಗ್ಗ ಜಿಲ್ಲೆ, ನಿಂಧಿಗೆ ಕೈಗಾರಿಕಾ ಪ್ರದೇಶದಲ್ಲಿ ಆಟೋ ಕಾಂಪೋನೆಂಟ್ಸ್ ವಿಶೇಷ ಆರ್ಥಿಕ ವಲಯ ಸ್ಥಾಪನೆಯನ್ನು ಕೈಬಿಟ್ಟಿರುವು ದರಿಂದ, ಸದರಿ ವಲಯದಲ್ಲಿ ನಿವೇಶನ ಹಂಚಿಕೆ ಮಾಡುವ ಬಗ್ಗೆ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ವಕೈ/126 ಜಕೈಇ/ 2009, ದಿನಾಂಕ: 08.12.2009ರ ಆದೇಶದಂತೆ ಸದರಿ 250 ಎಕರೆ ಜಮೀನನ್ನು ಮೆ: ಶಾಹಿ ಎಕ್ಸ್‌ಪೋರ್ಟ್ ಪ್ರೈವೇಟ್ ಲಿ, ಬೆಂಗಳೂರು ಇವರು ರೂ.533.19 ಕೋಟಿ ಬಂಡವಾಳ ಹೂಡಿ, ನೇಯ್ಗೆ, ಜವಳಿ ಹಾಗೂ ಸಿದ್ಧ ಉಡುಪು ತಯಾರಿಕಾ ಘಟಕವನ್ನು ಸ್ಥಾಪಿಸಲು ದಿನಾಂಕ: 06.02.2010 ರಂದು ಹಂಚಿಕೆ ಮಾಡಲಾಗಿದೆ. ಇದು ಒಂದೇ ಘಟಕವಾಗಿರುತ್ತದೆ.

ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ನಿವೇಶನ ಹಂಚಿಕೆ ಕುರಿತು

50 (28) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ನಿವೇಶನ ರಹಿತರಿಗೆ ನಿವೇಶನ ನೀಡುವ ಸಲುವಾಗಿ ಸರ್ಕಾರಿ ಜಮೀನುಗಳನ್ನು ಗುರುತಿಸಲಾ ಗಿದೆಯೇ, (ತಾಲ್ಲೂಕು, ಗ್ರಾಮ, ಸರ್ವೆ ನಂಬರುವಾರು ವಿವರ ನೀಡುವುದು);

ಆ) ಗುರುತಿಸಿದ್ದಲ್ಲಿ, ಈ ಗ್ರಾಮಗಳಲ್ಲಿ ಸೂಕ್ತವಾದ ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದಲ್ಲಿ ಪರ್ಯಾಯ ಮಾರ್ಗವಾಗಿ ಭೂಸ್ವಾಧೀನಪಡಿಸಿ ಕೊಳ್ಳಲು ಗುರುತಿಸಲಾದ ಜಮೀನುಗಳ ವಿವರ ನೀಡುವುದು.

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ ನಿವೇಶನ ರಹಿತರಿಗೆ ನಿವೇಶನ ನೀಡಲು ಗುರುತಿಸಲಾಗಿರುವ ಜಮೀನು ವಿವರ ಈ ಕೆಳಕಂಡಂತೆ ಇದೆ.

1. ಶಿವಮೊಗ್ಗ ತಾಲ್ಲೂಕು, ಆಯನೂರು ಗ್ರಾಮದ ಸರ್ವೆ ನಂಬರ್ 154 ಮತ್ತು 155ರಲ್ಲಿ 1.26ಎಕರೆ ಮತ್ತು ಸರ್ವೆ